**ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ**

ದೂರವಾಣಿ : 08272-224902, 298038
ಇ-ಮೇಲ್: wlmadikeri@gmail.com

**ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಮಡಿಕೇರಿ ವನ್ಯಜೀವಿ ವಿಭಾಗ, ಮಡಿಕೇರಿ-571201.**

ಸಂಖ್ಯೆ: ಎ2.ಬಿಜಿಟಿ.ವಿವ.04/2019-20 ದಿನಾಂಕ:03-06-2019

# ಮರು ಪ್ರಕಟಣೆ

ಉಲ್ಲೇಖ:- ಈ ಕಚೇರಿ ಅಲ್ಪಾವಧಿ ಟೆಂಡರ್ **ಅಧಿಸೂಚನೆ-02** ಸಮ ಸಂಖ್ಯೆ ದಿ: 24.04.2019.

2019-20 ನೇ ಸಾಲಿನಲ್ಲಿ ಮಡಿಕೇರಿ ವನ್ಯಜೀವಿ ವಿಭಾಗದಲ್ಲಿ ಕೆಲವು ಕಾಮಗಾರಿಗಳನ್ನು ನಿರ್ವಹಿಸಲು ಉಲ್ಲೇಖದ ಅಧಿಸೂಚನೆಯಲ್ಲಿ **ಮೊದಲನೆ** ಟೆಂಡರನ್ನು ದಿನಾಂಕ: 13.05.2019 ಹಾಗೂ **ಎರಡನೇ** ಟೆಂಡರನ್ನು ದಿನಾಂಕ: 15.05.2019 ರಂದು ಕರೆಯಲಾಗಿತ್ತು. ಸದರಿ ಟೆಂಡರಿಗೆ ಯಾರು ಭಾಗವಹಿಸದೆ ಇರುವುದರಿಂದ, ಅಧಿಸೂಚನೆ ಅನುಬಂಧದ-01ರಲ್ಲಿ ನಮೂದಿಸಿರುವ ಕಾಮಗಾರಿಗಳಿಗೆ ದಿನಾಂಕ: **12.06.2019** ರಂದು **ಮರು ಟೆಂಡರ್ ಕರೆಯಲಾಗಿರುತ್ತದೆ.** ಉಲ್ಲೇಖದ ಅಧಿಸೂಚನೆಯ ಅನುಬಂಧ-02ರ ನಿಬಂಧನೆ/ ಷರತ್ತುಗಳು ಅನ್ವಯಿಸುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಡಿಕೇರಿ ವನ್ಯಜೀವಿ ವಿಭಾಗ.

<u>ಪ್ರತಿಯನ್ನು:-</u>

1. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಟೆಂಡರ್ ಬುಲ್ಲೆಟೆನ್ ಅಧಿಕಾರಿ,ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಕಳುಹಿಸುತ್ತಾ, ಈ ಪ್ರಕಟಣೆಯನ್ನು ಜಿಲ್ಲಾ ಟೆಂಡರ್ ಬುಲ್ಲೆಟೆನ್‌ನಲ್ಲಿ ಪ್ರಕಟಪಡಿಸಲು ತಮ್ಮಲ್ಲಿ ವಿನಂತಿ.
2. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರ ಮಾಹಿತಿಗಾಗಿ ಕಳುಹಿಸುತ್ತಾ, ಈ ಪ್ರಕಟಣೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಪಡಿಸಲು ತಮ್ಮ ವಿನಂತಿ.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರ ಮಾಹಿತಿಗಾಗಿ ಕಳುಹಿಸಿದೆ.
5. ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಪುಷ್ಪಗಿರಿ/ತಲಕಾವೇರಿ/ಮಾಕುಟ್ಟ/ಶ್ರೀಮಂಗಲ ಇವರ ಮಾಹಿತಿಗಾಗಿ ಕಳುಹಿಸಿದೆ.

**ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ**

ದೂರವಾಣಿ : 08272–224902, 298038
ಇ–ಮೇಲ್: wlmadikeri@gmail.com

**ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಮಡಿಕೇರಿ ವನ್ಯಜೀವಿ ವಿಭಾಗ, ಮಡಿಕೇರಿ–571201.**

ಸಂಖ್ಯೆ: ಎ2.ಬಿಜಿಟಿ.ವಿವ.04/2019–20 ದಿನಾಂಕ:24–04–2019

## ಅಲ್ಪಾವಧಿ–ಟೆಂಡರ್ ಅಧಿಸೂಚನೆ–02

ಈ ಮೂಲಕ ಸಾರ್ವಜನಿಕರಿಗೆ/ ಈ ವಿಭಾಗದ ನೊಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2019–20 ನೇ ಸಾಲಿನಲ್ಲಿ ಮಡಿಕೇರಿ ವನ್ಯಜೀವಿ ವಿಭಾಗದಲ್ಲಿ ವಿವಿಧ ಕಾಮಗಾರಿ/ಕಾರ್ಯಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರ ಕಚೇರಿಯಲ್ಲಿ ಟೆಂಡರನ್ನು ಕರೆಯಲಾಗಿದೆ.

**ಮೊದಲನೆ** ಟೆಂಡರನ್ನು ದಿನಾಂಕ: 13.05.2019 ರಂದು ನಿಗದಿಪಡಿಸಲಾಗಿದೆ. ಸದರಿ ದಿನದಂದು ನಡೆಯುವ ಟೆಂಡರಿಗೆ ಯಾವುದೇ ಟೆಂಡರು ಬಾರದಿದ್ದಲ್ಲಿ **ಎರಡನೆಯ** ಟೆಂಡರನ್ನು ದಿನಾಂಕ: 15.05.2019 ರಂದು ನಡೆಸಲಾಗುವುದು. ಈ ಬಗ್ಗೆ ಪ್ರತ್ಯೇಕ ಟೆಂಡರು ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

1. ಕಾಮಗಾರಿಗಳ ವಿವರ **ಅನುಬಂಧ–01**ರಲ್ಲಿ ಮತ್ತು ನಿಬಂಧನೆ/ಷರತ್ತುಗಳನ್ನು **ಅನುಬಂಧ–02**ರಲ್ಲಿ ತಿಳಿಸಲಾಗಿರುತ್ತದೆ.
2. ಕಾಮಗಾರಿಗಳ ವಿವರ/ ಮಾಹಿತಿಗಳನ್ನು ಕೆಳ ಸಹಿದಾರರ ಕಚೇರಿಯಿಂದ/ ಸಂಬಂಧಪಟ್ಟ ವಲಯ ಕಚೇರಿಗಳಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಮಡಿಕೇರಿ,

**<u>ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:</u>**

1. ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ: 08272–224902/298038.
2. ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ,
   ಪುಷ್ಪಗಿರಿ– 08276–281107/ ತಲಕಾವೇರಿ–08272–243111/ ಶ್ರೀಮಂಗಲ–08274–246331

## ಅನುಬಂಧ-01

_ವೃತ್ತ: ಕೊಡಗು ವಿಭಾಗ: ವನ್ಯಜೀವಿ ವಿಭಾಗ, ಮಡಿಕೇರಿ.

### -: ಅಲ್ಪಾವಧಿ ಟೆಂಡರ್ ಅಧಿಸೂಚನೆ-02 ಕಾಮಗಾರಿಗಳ ವಿವರ:-

| ಕ್ರ. ಸಂ | ಕಾಮಗಾರಿಯ ವಿವರ | ವನ್ಯಜೀವಿ ವಲಯ | ಕೆಲಸದ ಸ್ಥಳ | ಪ್ರಮಾಣ | ಅಂದಾಜು ಮೊತ್ತ ರೂ. | ಇ.ಎಂ.ಡಿ. ಮೊಬಲಗು ರೂ. | ಕಾಮಗಾರಿ ಪೂರ್ಣಗೊಳಿಸ ಬೇಕಾದ ಅವಧಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 2406-02-110-ವನ್ಯಜೀವಿ ಸಂರಕ್ಷಣೆ-0-54-ಪ್ರಾಕೃತಿಕ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನ ನಿರ್ವಹಣೆ ಮತ್ತು ಮಾನವ-ವನ್ಯಪ್ರಾಣಿ ಸಂಘರ್ಷ ಕ್ರಮಗಳು-139 ಪ್ರಧಾನ ಕಾಮಗಾರಿ (ಯೋಜನೆ) | | | | | | | |
| ದಿನಾಂಕ: 01.04.2019 ರಿಂದ 31.03.2020 ರವರೆಗೆ ಪ್ರತಿ ಶಿಬಿರದಲ್ಲಿ 04 ಜನ ಕಾವಲುಗಾರರು. | | | | | | | |
| 1. | ಕಳ್ಳಬೇಟೆ ತಡೆ ಶಿಬಿರದ ಕಾವಲುಗಾರರಿಗೆ ಆಹಾರ ಭತ್ಯೆ ಒದಗಿಸುವುದು. | ಪುಷ್ಪಗಿರಿ | ಬೀದಳ್ಳಿ | 01 ಕ್ಯಾಂಪ್ | 1,08,600.00 | 3,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 2. | | | ಗಿರಿಗದ್ದೆ | 01 ಕ್ಯಾಂಪ್ | 1,08,600.00 | 3,000.00 | |
| 3. | | | ಮಾರಿಗುಂಡಿ | 01 ಕ್ಯಾಂಪ್ | 1,08,600.00 | 3,000.00 | |
| 4. | | | ಕೊತ್ತನಡ್ಕ | 01 ಕ್ಯಾಂಪ್ | 1,08,600.00 | 3,000.00 | |
| 5. | | | ಮಾಂದಲಪಟ್ಟಿ | 01 ಕ್ಯಾಂಪ್ | 1,08,600.00 | 3,000.00 | |
| 6. | | | ಕೂಜಿಮಲೆ | 01 ಕ್ಯಾಂಪ್ | 1,08,600.00 | 3,000.00 | |
| 7. | | | ಕಡಮಕಲ್ಲು | 01 ಕ್ಯಾಂಪ್ | 1,08,600.00 | 3,000.00 | |
| 8. | | | ಹಮ್ಮಿಯಾಲ | 01 ಕ್ಯಾಂಪ್ | 1,08,600.00 | 3,000.00 | |
| 9. | | ತಲಕಾವೇರಿ | ತಲಕಾವೇರಿ | 01 ಕ್ಯಾಂಪ್ | 1,08,600.00 | 3,000.00 | |
| 10. | | | ಹಕ್ಕಿಕಂಡಿ | 01 ಕ್ಯಾಂಪ್ | 1,08,600.00 | 3,000.00 | |
| 11. | | | ಮೇಲಡ್ಕ | 01 ಕ್ಯಾಂಪ್ | 1,08,600.00 | 3,000.00 | |
| 12. | | | ನಿಶಾನಿಮೊಟ್ಟೆ | 01 ಕ್ಯಾಂಪ್ | 1,08,600.00 | 3,000.00 | |
| 13. | | | ಚಾಂದಾಟುಕೊಲ್ಲಿ -1st | 01 ಕ್ಯಾಂಪ್ | 1,08,600.00 | 3,000.00 | |
| 14. | | | ಚಾಂದಾಡುಕೊಲ್ಲಿ-2nd | 01 ಕ್ಯಾಂಪ್ | 1,08,600.00 | 3,000.00 | |
| 15. | | | ನಾಡುಮಲೆ | 01 ಕ್ಯಾಂಪ್ | 1,08,600.00 | 3,000.00 | |
| 16. | | ಮಾಕುಟ್ಟ | ಮಾಕುಟ್ಟ | 01 ಕ್ಯಾಂಪ್ | 1,08,600.00 | 3,000.00 | |
| 17. | | | ಸೊಳ್ಳೆಕೊಲ್ಲಿ | 01 ಕ್ಯಾಂಪ್ | 1,08,600.00 | 3,000.00 | |
| 18. | | | ವಾಟೆಕೊಲ್ಲಿ | 01 ಕ್ಯಾಂಪ್ | 1,08,600.00 | 3,000.00 | |
| 19. | | | ಪೊಟ್ಟಚ್ಚಿಪಾರೆ | 01 ಕ್ಯಾಂಪ್ | 1,08,600.00 | 3,000.00 | |
| 20. | | | ಕೂಟಿಯಾಲ | 01 ಕ್ಯಾಂಪ್ | 1,08,600.00 | 3,000.00 | |
| 21. | | ಶ್ರೀಮಂಗಲ | ನಾಥಂಗಾಲ | 01 ಕ್ಯಾಂಪ್ | 1,08,600.00 | 3,000.00 | |
| 22. | | | ನರಿಮಲೆ | 01 ಕ್ಯಾಂಪ್ | 1,08,600.00 | 3,000.00 | |
| 23. | | | ಆಬ್ಬೈಲು | 01 ಕ್ಯಾಂಪ್ | 1,08,600.00 | 3,000.00 | |
| 24. | | | ಪೂಕಳ | 01 ಕ್ಯಾಂಪ್ | 1,08,600.00 | 3,000.00 | |
| 25. | | | ಕೂಟಿಯಾಲ | 01 ಕ್ಯಾಂಪ್ | 1,08,600.00 | 3,000.00 | |
| 26. | | | ತೆರಾಲು | 01 ಕ್ಯಾಂಪ್ | 1,08,600.00 | 3,000.00 | |
| 27. | | | ಪಾಚಿಬೈಲು | 01 ಕ್ಯಾಂಪ್ | 1,08,600.00 | 3,000.00 | |
| 28. | ಅರಣ್ಯ ರಕ್ಷಣಾ ಶಿಬಿರದ ಕಾವಲುಗಾರರಿಗೆ ಆಹಾರ ಭತ್ಯೆ ಒದಗಿಸುವುದು. | ಪುಷ್ಪಗಿರಿ | ವಣಚಲ್ಲು | 01 ಕ್ಯಾಂಪ್ | 1,08,600.00 | 3,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 29 | | ಮಾಕುಟ್ಟ | ಕೊಕ್ಕ | 01 ಕ್ಯಾಂಪ್ | 1,08,600.00 | 3,000.00 | |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| ದಿನಾಂಕ: 01.04.2019 ರಿಂದ 31.03.2020 ರವರೆಗೆ ಪ್ರತಿ ಶಿಬಿರದಲ್ಲಿ 05 ಜನ ಕಾವಲುಗಾರರು. | | | | | | | |
| 30. | Anti-Depredation Camp ಕಾವಲುಗಾರರಿಗೆ ಆಹಾರ ಭತ್ಯೆ ಒದಗಿಸುವುದು. | ಪುಷ್ಪಗಿರಿ | ಮುಟ್ಲು | 01 ಕ್ಯಾಂಪ್ | 1,35,750.00 | 3,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 31. | | ತಲಕಾವೇರಿ | ತಣ್ಣಿಮಾನಿ | 01 ಕ್ಯಾಂಪ್ | 1,35,750.00 | 3,500.00 | |
| 32. | | ಮಾಕುಟ್ಟ | ವಿ–ಬಾಡಗ | 01 ಕ್ಯಾಂಪ್ | 1,35,750.00 | 3,500.00 | |
| 33. | | ಶ್ರೀಮಂಗಲ | ಬಿರುನಾಣಿ | 01 ಕ್ಯಾಂಪ್ | 1,35,750.00 | 3,500.00 | |
| 34. | ಕಳ್ಳಬೇಟೆ ತಡೆ / ಅರಣ್ಯ ರಕ್ಷಣಾ ಶಿಬಿರಗಳ ಕಟ್ಟಡ ನಿರ್ವಹಣೆ/ ಬಲಪಡಿಸುವಿಕೆ | ಪುಷ್ಪಗಿರಿ | ಗಿರಿಗದ್ದೆ | 01 ಸಂಖ್ಯೆ | 1,00,000.00 | 2,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 35. | | | ಹಮ್ಮಿಯಾಲ (ಕಾಂಚಾರ) | 01 ಸಂಖ್ಯೆ | 1,00,000.00 | 2,500.00 | |
| 36. | | ಮಾಕುಟ್ಟ | ಸೊಳ್ಳೆಕೊಲ್ಲಿ | 01 ಸಂಖ್ಯೆ | 1,00,000.00 | 2,500.00 | |
| 37. | | | ಪೊಟ್ಟಚ್ಚಿಪಾರೆ | 01 ಸಂಖ್ಯೆ | 1,00,000.00 | 2,500.00 | |
| 38. | | ಶ್ರೀಮಂಗಲ | ತೆರಾಲು | 01 ಸಂಖ್ಯೆ | 1,00,000.00 | 2,500.00 | |
| 39. | | | ಪಾಚಿಬೈಲು | 01 ಸಂಖ್ಯೆ | 1,00,000.00 | 2,500.00 | |
| 40. | ಕೆರೆಯ ಹೂಳೆತ್ತುವುದು. | ಪುಷ್ಪಗಿರಿ | ವಣಚಲ್ಲು | 01 ಸಂಖ್ಯೆ | 1,60,000.00 | 4,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 41. | | ಮಾಕುಟ್ಟ | ಪಟ್ಟಮಲೆ | 01 ಸಂಖ್ಯೆ | 1,60,000.00 | 4,000.00 | |
| 42. | | ಶ್ರೀಮಂಗಲ | ನರಿಮಲೆ | 01 ಸಂಖ್ಯೆ | 1,60,000.00 | 4,000.00 | |
| 43. | ಬೋರ್‌ವೆಲ್‌ಗೆ ಸೋಲಾರ್ ಪಂಪ್ ಅಳವಡಿಸುವುದು | ಮಾಕುಟ್ಟ | ವಾಟೆಕೊಲ್ಲಿ | 01 ಸಂಖ್ಯೆ | 2,70,000.00 | 7,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 44. | ಹೈಡ್ರೋ–ಎಲ್ಕೆಟ್ರಿಕ್ ಜನರೇಟರ್ ಅಳವಡಿಸುವುದು. | ತಲಕಾವೇರಿ | ಮೇಲಡ್ಕ | 01 ಸಂಖ್ಯೆ | 1,65,000.00 | 4,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 45. | | | ನಿಶಾನಿಮೊಟ್ಟೆ | 01 ಸಂಖ್ಯೆ | 1,65,000.00 | 4,500.00 | |
| 46. | ಅರಣ್ಯ ರಸ್ತೆ ನಿರ್ವಹಣೆ | ತಲಕಾವೇರಿ | ತಲಕಾವೇರಿ– ನಾಡುಮಲೆ– | 13 ಕಿ.ಮೀ | 3,38,000.00 | 9,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 47. | ಅರಣ್ಯ ರಸ್ತೆ ನಿರ್ವಹಣೆ | ತಲಕಾವೇರಿ | ತಲಕಾವೇರಿ– ಮೂವಲೆಮೊಟ್ಟೆ | 04 ಕಿ.ಮೀ | 1,04,000.00 | 3,000.00 | |
| 48. | | | ನಾಡುಮಲೆ– ಚಾಂದಾಟುಕೊಲ್ಲಿ–2nd | 10 ಕಿ.ಮೀ | 2,60,000.00 | 7,000.00 | |
| 49. | | ಮಾಕುಟ್ಟ | ಮಾಕುಟ್ಟ– ಸೊಳ್ಳೆಕೊಲ್ಲಿ | 05 ಕಿ.ಮೀ | 1,30,000.00 | 4,000.00 | |
| 50. | | | ಸೊಳ್ಳೆಕೊಲ್ಲಿ–ಕೊಕ್ಕ | 19 ಕಿ.ಮೀ | 4,94,000.00 | 13,000.00 | |
| 2406–01–070–0–01–ರಸ್ತೆ, ಸೇತುವೆ ಮತ್ತು ಕಟ್ಟಡ (ನಿರ್ವಹಣೆ)–139 ಪ್ರಧಾನ ಕಾಮಗಾರಿ (ಯೋಜನೇತರ) | | | | | | | |
| 51. | FOC ಕಟ್ಟಡ ನಿರ್ವಹಣೆ/ ಬಲಪಡಿಸುವಿಕೆ | ಮಾಕುಟ್ಟ | ಮಾಕುಟ್ಟ | 01 ಸಂಖ್ಯೆ | 1,50,000.00 | 4,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 52. | ಅರಣ್ಯ ವಿಶ್ರಾಂತಿ ಗೃಹ ನಿರ್ವಹಣೆ | ತಲಕಾವೇರಿ | ತಲಕಾವೇರಿ | 01 ಸಂಖ್ಯೆ | 4,50,000.00 | 11,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 53. | ಸೇತುವೆ ದುರಸ್ಥಿ/ ಬಲಪಡಿಸುವಿಕೆ. | ತಲಕಾವೇರಿ | ನಾಡುಮಲೆ | 01 ಸಂಖ್ಯೆ | 4,50,000.00 | 11,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 54. | ಹಾನಿಯಾಗಿರುವ ರಸ್ತೆಯಲ್ಲಿ ಕಾಂಕ್ರಿಟ್ ಹಾಕುವುದು. | ಪುಷ್ಪಗಿರಿ | ವನ್ಯಧಾಮದ ಆಯ್ದ ರಸ್ತೆಗಳಲ್ಲಿ | 260 ಮೀಟರ್ | 2,60,000.00 | 6,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 2406-01-070-0-05-ವಸತಿ ಗೃಹಗಳ ನಿರ್ವಹಣೆ-200 ನಿರ್ವಹಣೆ ವೆಚ್ಚ (ಯೋಜನೇತರ) | | | | | | | |
| 55. | ಉ.ಅ.ಸಂ. ರವರ ಇಲಾಖಾ ವಸತಿ ಗೃಹ ನಿರ್ವಹಣೆ/ ಬಲಪಡಿಸುವಿಕೆ | ಪುಷ್ಪಗಿರಿ | ಮಡಿಕೇರಿ | 01 ಸಂಖ್ಯೆ | 1,30,000.00 | 3,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 56. | ಅರಣ್ಯ ರಕ್ಷಕರ ಇಲಾಖಾ ವಸತಿ ಗೃಹ ನಿರ್ವಹಣೆ/ ಬಲಪಡಿಸುವಿಕೆ | ತಲಕಾವೇರಿ | ತಲಕಾವೇರಿ ಜೋಡಿ ವಸತಿ ಗೃಹ | 01 ಸಂಖ್ಯೆ | 2,50,000.00 | 6,500.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 57. | ಅರಣ್ಯ ವೀಕ್ಷಕರ ಇಲಾಖಾ ವಸತಿ ಗೃಹ ನಿರ್ವಹಣೆ/ ಬಲಪಡಿಸುವಿಕೆ | ಶ್ರೀಮಂಗಲ | ಇರ್ಪು ಜೋಡಿ ವಸತಿ ಗೃಹ | 01 ಸಂಖ್ಯೆ | 2,00,000.00 | 5,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| ದಿನಾಂಕ: 01.04.2019 ರಿಂದ 31.05.2019 ರವರೆಗೆ (ಪ್ರತಿ ತಂಡದಲ್ಲಿ 15 ಜನ ಕಾವಲುಗಾರರು). | | | | | | | |
| 2406-02-110-0-47-ಸಿಎಸ್ಎಸ್-ಐಡಿಡಬ್ಲ್ಯುಹೆಚ್-ಪುಷ್ಪಗಿರಿ-139 ಪ್ರಧಾನ ಕಾಮಗಾರಿ (ಯೋಜನೆ) | | | | | | | |
| 58. | ಬೆಂಕಿ ರಕ್ಷಣಾ ಶಿಬಿರದ ಕಾಲುಗಾರರಿಗೆ ಆಹಾರ ಭತ್ಯೆ ಒದಗಿಸುವುದು. | ಪುಷ್ಪಗಿರಿ | ಪುಷ್ಪಗಿರಿ ವನ್ಯಜೀವಿ ವಲಯ | 01 ಕ್ಯಾಂಪ್ | 64,125.00 | 2,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 2406-02-110-0-47-ಸಿಎಸ್ಎಸ್-ಐಡಿಡಬ್ಲ್ಯುಹೆಚ್-ತಲಕಾವೇರಿ-139 ಪ್ರಧಾನ ಕಾಮಗಾರಿ (ಯೋಜನೆ) | | | | | | | |
| 59. | -ಅದೇ- | ತಲಕಾವೇರಿ | ತಲಕಾವೇರಿ ವನ್ಯಜೀವಿ ವಲಯ | 01 ಕ್ಯಾಂಪ್ | 64,125.00 | 2,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 2406-02-110-0-47-ಸಿಎಸ್ಎಸ್-ಐಡಿಡಬ್ಲ್ಯುಹೆಚ್-ಬ್ರಹ್ಮಗಿರಿ-139 ಪ್ರಧಾನ ಕಾಮಗಾರಿ (ಯೋಜನೆ) | | | | | | | |
| 60. | -ಅದೇ- | ಮಾಕುಟ್ಟ | ಮಾಕುಟ್ಟ ವನ್ಯಜೀವಿ ವಲಯ | 01 ಕ್ಯಾಂಪ್ | 64,125.00 | 2,000.00 | ಕಾರ್ಯದೇಶದಲ್ಲಿ ತಿಳಿಸಲಾಗುವುದು. |
| 61. | | ಶ್ರೀಮಂಗಲ | ಶ್ರೀಮಂಗಲ ವನ್ಯಜೀವಿ ವಲಯ | 01 ಕ್ಯಾಂಪ್ | 64,125.00 | 2,000.00 | |

- ಕ್ರ.ಸಂ: 30 ರಿಂದ 39, 42 ಮತ್ತು 57 ರ ಕಾಮಗಾರಿಗಳನ್ನು ಅನುಸೂಚಿತ **ಜಾತಿಗಳ** ವರ್ಗಕ್ಕೆ ಮೀಸಲಿರಿಸಲಾಗಿದೆ.
- ಕ್ರ.ಸಂ: 41, 46 ಮತ್ತು 49 ರ ಕಾಮಗಾರಿಗಳನ್ನು ಅನುಸೂಚಿತ **ಪಂಗಡಗಳ** ವರ್ಗಕ್ಕೆ ಮೀಸಲಿರಿಸಲಾಗಿದೆ.

ಮಡಿಕೇರಿ.
ದಿನಾಂಕ:24.04.2019

ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಮಡಿಕೇರಿ.

## ಅನುಬಂಧ-02

## ಅಲ್ಪಾವಧಿ ಟೆಂಡರ್ ಅಧಿಸೂಚನೆ-02 ಟೆಂಡರ್ ಷರತ್ತು ಮತ್ತು ನಿಬಂಧನೆಗಳು

1. ಈ ವಿಭಾಗದಲ್ಲಿ ನೊಂದಣಿಯಾಗಿರುವ ಅರಣ್ಯ ಗುತ್ತಿಗೆದಾರರು ಮಾತ್ರ ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.
2. ಟೆಂಡರಿಗೆ ಭಾಗವಹಿಸುವ ಅರಣ್ಯ ಗುತ್ತಿಗೆದಾರರು/ ಸಂಸ್ಥೆಯವರು ಅರಣ್ಯ ಇಲಾಖೆಯ ಯಾವುದಾದರು ವಿಭಾಗದಲ್ಲಿ **ಡಿಫಾಲ್ಟರ್ ಆದವರು / ಕಪ್ಪುಪಟ್ಟಿಯಲ್ಲಿ ಸೇರಿದವರು / ಕಾಮಗಾರಿಯನ್ನು ಪೂರ್ಣಗೊಳಿಸದೇ ಬಿಟ್ಟುಹೋದವರು** ಟೆಂಡರಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
3. ಅರಣ್ಯ ಮೊಕದ್ದಮೆ/ ಇತರೆ ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ಎದುರಿಸುತ್ತಿರುವವರು/ ಭಾಗಿಯಾಗಿರುವವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
4. ಷರತ್ತು ಕ್ರ.ಸಂ: (02) ಮತ್ತು (03)ರಲ್ಲಿ ಇರುವ ವಿಚಾರಗಳಲ್ಲಿ ಟೆಂಡರುದಾರರು ಭಾಗಿಯಾಗಿರುವುದಿಲ್ಲವೆಂದು **ರೂ. 100.00 ರ ಛಾಪಾ ಕಾಗದದಲ್ಲಿ ಶಪಥ ಪತ್ರವನ್ನು ನೋಟರಿಯಿಂದ ದೃಢೀಕರಿಸಿ** ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
5. ಸಿವಿಲ್ ಕಾಮಗಾರಿಗಳಿಗೆ ಭಾಗವಹಿಸುವವರು ಕಡ್ಡಾಯವಾಗಿ ಲೋಕೋಪಯೋಗಿ (ಪಿ.ಡಬ್ಲ್ಯೂ.ಡಿ) ಇಲಾಖೆಯ ಕ್ಲಾಸ್-01 (Class-I) ನೊಂದಾಯಿತ ಗುತ್ತಿಗೆದಾರರಾಗಿರಬೇಕು ಈ ಬಗ್ಗೆ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
6. ಅನುಸೂಚಿತ ಜಾತಿ/ಪಂಗಡಗಳಿಗೆ ಮೀಸಲಿಡಲಾದ ಕಾಮಗಾರಿಗಳಿಗೆ ಭಾಗವಹಿಸುವವರು ಕಡ್ಡಾಯವಾಗಿ ದೃಢೀಕೃತ ಜಾತಿ ಪ್ರಮಾಣ ಪತ್ರವನ್ನು ಟೆಂಡರಿಗೆ ಭಾಗವಹಿಸುವಾಗ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.
7. ಕಾಮಗಾರಿಗೆ ಭಾಗವಹಿಸುವ ಟೆಂಡರುದಾರರು ಸ್ವಂತ ಯಂತ್ರಗಳನ್ನು ಹೊಂದಿರತಕ್ಕದ್ದು ಮತ್ತು ಅರಣ್ಯ ಇಲಾಖೆಯಲ್ಲಿ ಕಳೆದ 03 ವರ್ಷಗಳಲ್ಲಿ ಅರಣ್ಯ ಕಾಮಗಾರಿ ಅಥವಾ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಿ ಅದನ್ನು **ಎರಡು** ವರ್ಷದವರೆಗೆ ನಿರ್ವಹಣೆ ಮಾಡಿರುವ ಬಗ್ಗೆ ದೃಢೀಕರಣ ಪತ್ರ, ಯಂತ್ರಗಳ ಮಾಲೀಕತ್ವದ ದೃಢೀಕರಣ ಪತ್ರ ಮತ್ತು ಟೆಂಡರುದಾರರಲ್ಲಿ ಲಭ್ಯವಿರುವ ಇತರೆ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದೇ ಇದ್ದಲ್ಲಿ ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.
8. ಟೆಂಡರ್‌ನಲ್ಲಿ ಭಾಗವಹಿಸುವ ಅರಣ್ಯ ಗುತ್ತಿಗೆದಾರರು/ ಸಂಸ್ಥೆಯವರು ಕಂದಾಯ ಇಲಾಖೆಯಿಂದ ಪಡೆದಿರುವ **ರೂ. 02.00 ಲಕ್ಷ** ಮೌಲ್ಯದ **ರೆವಿನ್ಯೂ ಸಾಲ್ವೆನ್ಸಿ** (Revenue Solvency) ಚಾಲ್ತಿಯಲ್ಲಿರುವ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
9. **ಅನುಬಂಧ-01**ರಲ್ಲಿ ನಮೂದಿಸಿರುವ ಕಾಮಗಾರಿಗಳನ್ನು ನಿರ್ವಹಿಸಲು ನಿಗಧಿಪಡಿಸಿರುವ ಸ್ಥಳವನ್ನು ಟೆಂಡರುದಾರರೇ ಖುದ್ದಾಗಿ ಬೇಟಿ ಮಾಡಿ/ ಪರಿಶೀಲನೆ ಮಾಡಿ ಆ ಕಾಮಗಾರಿಯ ವಿವರವನ್ನು ಖಚಿತಪಡಿಸಿಕೊಳ್ಳತಕ್ಕದ್ದು. ನಿಗಧಿಪಡಿಸಲಾದ ಕಾಮಗಾರಿಗಳ ಸಂಖ್ಯೆ/ ಸ್ಥಳ/ ಮೊಬಲಗು ವ್ಯತ್ಯಾಸವಾದಲ್ಲಿ ಪರಿಷ್ಕೃತ ವಿವರವನ್ನು ಕಾರ್ಯದೇಶದ ಮೊದಲು ನೀಡಲಾಗುವುದು. ಅಂತಹ ಕಾಮಗಾರಿಗಳನ್ನು ಸಹ ನಿರ್ವಹಿಸಬೇಕಾಗಿರುತ್ತದೆ.
10. ಟೆಂಡರ್‌ನಲ್ಲಿ ಒಪ್ಪಿಗೆಯಾಗುವ ದರಗಳು 2019-20ನೇ ಸಾಲಿನ ಅಂತ್ಯದವರೆಗೆ (31-03-2020) ಚಾಲ್ತಿಯಲ್ಲಿರುತ್ತವೆ ಹಾಗೂ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿ ಹೆಚ್ಚು ಅಥವಾ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಹೆಚ್ಚುವರಿಯಾಗುವ ಕೆಲಸವನ್ನು ಅನುಮೋದನೆಗೊಳ್ಳುವ ಟೆಂಡರಿನ ದರದಲ್ಲಿಯೇ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಯವರು ಸೂಚಿಸುವ ಜಾಗದಲ್ಲಿಯೇ ನಿರ್ವಹಿಸತಕ್ಕದ್ದು.
11. ನಿರ್ದಿಷ್ಟ ಕಾರಣಗಳನ್ನು ಸೂಚಿಸದೇ ಟೆಂಡರನ್ನು ಪರಿಷ್ಕರಿಸುವ/ ರದ್ದುಪಡಿಸುವ ಹಕ್ಕು ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರದಾಗಿದ್ದು, ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯಿಂದ ಪಡೆದುಕೊಳ್ಳತಕ್ಕದ್ದು.

12. ಟೆಂಡರನ್ನು **ಮುಂಗಡವಾಗಿ** ಕರೆಯಲಾಗಿದ್ದು, ಕಾಮಗಾರಿಗಳ ಮುಂದೆ ನಮೂದಿಸಿರುವ ಟೆಂಡರ್ ಪರಿಮಾಣ/ ಮೊತ್ತದಲ್ಲಿ ವ್ಯತ್ಯಾಸವಾಗುವ ಸಾಧ್ಯತೆಗಳಿವೆ. ಅನುದಾನದ ಲಭ್ಯತೆಗೆ ಅನುಗುಣವಾಗಿ ಪೂರ್ಣಗೊಂಡ ಕಾಮಗಾರಿಗಳ ವೆಚ್ಚವನ್ನು ಪಾವತಿಸಲಾಗುವುದು.

13. ಟೆಂಡರ್ ದರವನ್ನು ನಮೂದಿಸುವಾಗ ಇಲಾಖೆಯ ಅಂದಾಜು ಮೊತ್ತದ ಮೇಲೆ ಶೇಕಡವಾರು ಇಂತಿಷ್ಟು ಹೆಚ್ಚು/ ಕಡಿಮೆ ಎಂಬುವುದನ್ನು ಮಾತ್ರ ಟೆಂಡರ್ ನಮೂನೆಯಲ್ಲಿ ನಿಖರವಾಗಿ/ ಸ್ಪಷ್ಟವಾಗಿ ನಮೂದಿಸುವುದು. ಈ ದರವು ಕಾಮಗಾರಿಯ ವೆಚ್ಚ/ ಸಾಮಾಗ್ರಿಗಳ ವೆಚ್ಚ/ಎಲ್ಲಾ ತೆರಿಗೆಗಳು/ಸರಕು ಸಾಗಾಣಿಕೆ ವೆಚ್ಚ/ ಇತರೆ ಎಲ್ಲ ವೆಚ್ಚಗಳನ್ನು ಒಳಗೊಂಡಿರುತ್ತದೆ ಎಂದು ಟೆಂಡರುದಾರರು ತಿಳಿಯತಕ್ಕದ್ದು.

14. ಟೆಂಡರಿನಲ್ಲಿ ಭಾಗವಹಿಸುವವರು ಟೆಂಡರಿಗೆ ನಿಗಧಿಪಡಿಸಿದ ದಿನಾಂಕದ **ಎರಡು ದಿನಗಳಿಗೆ** ಮುಂಚಿತವಾಗಿ ಈ ವಿಭಾಗದಲ್ಲಿ 2019-20ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರಬೇಕು. ಅಲ್ಲದೆ ಆದಾಯ ತೆರಿಗೆ PAN/GST ಸಂಖ್ಯೆ ಹೊಂದಿರಬೇಕು ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ. ಟೆಂಡರ್ ದಿನದಂದು ಗುತ್ತಿಗೆದಾರರ ನೊಂದಾಣಿ ಮಾಡಲಾಗುವುದಿಲ್ಲ.

15. ಟೆಂಡರುದಾರರು ಮೇಲಿನ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವ್ಯವಸ್ಥೆಯನ್ನು ಅವರ ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳಬೇಕು.

16. ಅಪ್ರಾಪ್ತ ವಯಸ್ಕರು/ ಕಾನೂನಿನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿಗಳಿಂದ ಟೆಂಡರನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಇಲಾಖೆಗೆ ತಿಳಿಯದಂತೆ, ಸದರಿ ವ್ಯಕ್ತಿಗಳು ಟೆಂಡರ್ ಹಾಕಿ ನಂತರ ಅಂತಹ ವಿಚಾರ ತಿಳಿದಲ್ಲಿ ಆ ಗುತ್ತಿಗೆಯನ್ನು ರದ್ದುಗೊಳಿಸಿ ಅವರು ಇಲಾಖೆಯಲ್ಲಿ ಇಟ್ಟಿರುವ ಇ.ಎಂ.ಡಿ./ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

17. **2019-20ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ ಮತ್ತು ಅಂದಾಜು ಪಟ್ಟಿಗಳ ಮಂಜೂರಾತಿಯ ನಿರೀಕ್ಷೆಯ ಮೇರೆ ಈ ಟೆಂಡರ್ ಪ್ರಕಟಣೆಯನ್ನು ಕರೆಯಲಾಗಿದೆ. ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ಪಡೆದ ನಂತರ ಅಂದಾಜು ಪಟ್ಟಿಗಳನ್ನು ನೀಡಲಾಗುವುದು.**

18. ಟೆಂಡರ್ ಅಂಗೀಕರಿಸಿದ ನಂತರ ಅನುಮೋದನೆ ಕುರಿತು ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು ಅಲ್ಲಿಯವರೆಗೆ ಸಫಲ ಟೆಂಡರುದಾರಿಗೆ ಇ.ಎಂ.ಡಿ ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಈ ಅವಧಿಯಲ್ಲಿ ಟೆಂಡರುದಾರರು ಇ.ಎಂ.ಡಿ ಹಣವನ್ನು ವಾಪಸ್ಸು ಪಡೆಯಲು/ ಯಾವುದೇ ಬಡ್ಡಿಯನ್ನು ಪಡೆಯಲು ಅವಕಾಶವಿರುವುದಿಲ್ಲ.

19. ಅತೀ ಕಡಿಮೆ ದರ ಸೂಚಿಸಿರುವ ಟೆಂಡರ್ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅವುಗಳ ಪೈಕಿ ಒಂದು ಟೆಂಡರನ್ನು ಮಾತ್ರ ಒಪ್ಪಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ. ಆದ್ದರಿಂದ ಅಂತಹ ಟೆಂಡರುದಾರರು ರಾಜಿ ಒಪ್ಪಂದ ಮಾಡಿಕೊಂಡು ಅಂತಿಮವಾಗಿ ತಿಳಿಸಲಾಗುವ ರಾಜಿ ಒಪ್ಪಂದದ ಲಿಖಿತ ತೀರ್ಮಾನವನ್ನು ಅಂತಿಮಗೊಳಿಸಲಾಗುವುದು.

20. ಗುತ್ತಿಗೆದಾರರು ತಮ್ಮದೇ ಆದ ಷರತ್ತುಗಳನ್ನೊಳಗೊಂಡ ಟೆಂಡರುಗಳನ್ನು ಸಲ್ಲಿಸಲ್ಪಟ್ಟಲ್ಲಿ ಅಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು. ಈ ಬಗ್ಗೆ ಏನಾದರು ತಕರಾರುಗಳು ಉಂಟಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರ ತೀರ್ಮಾನವೇ ಅಂತಿಮವಾಗಿರುತ್ತದೆ.

21. ಮೇಲಿನ ಕಾಮಗಾರಿಗಳನ್ನು ಕಡ್ಡಾಯವಾಗಿ ನಿಗಧಿಪಡಿಸಲಾದ ದಿನಾಂಕದೊಳಗೆ ಪೂರ್ಣಗೊಳಿಸಿ ಚೆಕ್‌ಮೆಸರ್‌ಮೆಂಟ್ (ಕಾಮಗಾರಿಗಳ ಅಳತೆ ಪುಸ್ತಕದಲ್ಲಿ ಅಳತೆ ದಾಖಲಿಸಿದ ನಂತರ) ಮಾಡಿಸಿ ಸಾದಿಲ್ವಾರು ವೆಚ್ಚದ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ಅನುವು ಮಾಡಿಕೊಡತಕ್ಕದ್ದು.

22. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರು ಟೆಂಡರುಗಳನ್ನು ಅಂಗೀಕರಿಸುವ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

23. ಟೆಂಡರಿನಲ್ಲಿ ಸಫಲರಾದ ಅರಣ್ಯ ಗುತ್ತಿಗೆದಾರರಿಗೆ ಸ್ಥಿರೀಕರಣ ಆದೇಶ ನೀಡಿದ 07 **ದಿನಗಳ** ಒಳಗೆ ಅವರು ಈ ಕಚೇರಿಗೆ ಹಾಜರಾಗಿ ಕಾಮಗಾರಿಯ ಒಟ್ಟು ಮೊತ್ತದ **ಶೇ. 05 ಭದ್ರತಾ ಠೇವಣಿಯನ್ನು ಮುಂಗಡವಾಗಿ** ಇಲಾಖೆಗೆ ನೀಡಿ (ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ ಗ್ಯಾರಂಟಿ/ ಟರ್ಮ್ ಡಿಪಾಜಿಟ್ ಅವಧಿಯು 30 **ತಿಂಗಳವರೆಗೆ** ಚಾಲ್ತಿಯಲ್ಲಿರುವಂತೆ ನೀಡುವುದು ಕಡ್ಡಾಯವಾಗಿರುತ್ತದೆ) ರೂ. 100.00ರ ಸರ್ಕಾರಿ ಛಾಪ ಕಾಗದದಲ್ಲಿ ಕರಾರು ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ಪಡೆದ ನಂತರ ನಿಗಧಿಪಡಿಸಿದ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸತಕ್ಕದ್ದು, ಕಾಮಗಾರಿಯ ಅವಧಿಯನ್ನು ವಿಸ್ತರಿಸುವ/ ಕಡಿಮೆಗೊಳಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರು ಹೊಂದಿರುತ್ತಾರೆ.

24. ಒಂದು ವೇಳೆ ಟೆಂಡರುದಾರರು ಇಲಾಖೆಯಿಂದ ನಿಗಧಿಪಡಿಸಿದ ಕಾಮಗಾರಿಯ ಅಂದಾಜು ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ದರಸೂಚಿಸಿ ಅವರು ಸೂಚಿಸಿರುವ ದರವನ್ನು ಇಲಾಖೆಯಿಂದ ಅಂಗೀಕರಿಸಲ್ಪಟ್ಟಲ್ಲಿ ಇಲಾಖೆಯ ದರ ಮತ್ತು ಟೆಂಡರುದಾರರ ದರಕ್ಕೆ ಇರುವ ವ್ಯತ್ಯಾಸದ ಮೊತ್ತವನ್ನು (ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ ಗ್ಯಾರಂಟಿ/ ಟರ್ಮ್ ಡಿಪಾಜಿಟ್ ಅವಧಿಯು 15 **ತಿಂಗಳವರೆಗೆ** ಚಾಲ್ತಿಯಲ್ಲಿರುವಂತೆ ನೀಡುವುದು ಕಡ್ಡಾಯವಾಗಿರುತ್ತದೆ) ಕರಾರು ಒಪ್ಪಂದ ಮಾಡಿಕೊಳ್ಳುವ ಅವಧಿಯಲ್ಲಿ ಇಲಾಖೆಗೆ ಮುಂಗಡವಾಗಿ ನೀಡಲು ಟೆಂಡರುದಾರರು ಬದ್ಧರಾಗಿರಬೇಕು.

25. ಮೇಲಿನ ಕಾಮಗಾರಿಗಳ ಅನುಷ್ಠಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರಿಂದ ಅನುಮೋದಿಸಲ್ಪಡುವ ವಾರ್ಷಿಕ ಕ್ರಿಯಾ ಯೋಜನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ವೇಳೆ ಸರ್ಕಾರದಿಂದ ಹಣ ಬಿಡುಗಡೆಯಾಗಲು ತಡವಾದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ.

26. ಅನುಮೋದಿತ ಕೆಲಸಗಳು ಕಾಲೋಚಿತವಾಗಿ/ ನಿಗಧಿತ ಅವಧಿಯೊಳಗೆ ಪೂರ್ಣಗೊಂಡ ನಂತರ ಸದರಿ ಕೆಲಸಗಳ ಬಗ್ಗೆ ನಿಯಮಾನುಸಾರ ಸಂಬಂಧಿಸಿದ ಅಧಿಕಾರಿಗಳಿಂದ **100% ರಷ್ಟು** ಪರಿಶೀಲನೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಹಣ ಪಾವತಿಗಾಗಿ ಸಂಬಂಧಿಸಿದ ಬಿಲ್ಲನ್ನು ಅಳತೆ ಪುಸ್ತಕ (ಎಂ.ಬಿ/ಎಫ್.ಎನ್.ಬಿ), ನಿರ್ವಹಿಸಲಾದ ಕಾಮಗಾರಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಾಗಿದೆ ಎಂಬ ದೃಢೀಕರಣ ಪತ್ರ ಮತ್ತು ಪೂರ್ಣಗೊಂಡ ಕಾಮಗಾರಿಯ ಛಾಯಾ ಚಿತ್ರದೊಂದಿಗೆ ವೆಚ್ಚವನ್ನು ಭರಿಸಲು ಈ ಕಚೇರಿಗೆ ಒಪ್ಪಿಸಬೇಕಾಗಿರುತ್ತದೆ. ಹಣ ಸಂದಾಯ ಮಾಡುವಾಗ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ/ ಜಿಎಸ್‌ಟಿ/ ರಾಜಧನ/ ಕಾರ್ಮಿಕ ಕಲ್ಯಾಣ ನಿಧಿ/ ಇತರೆ ತೆರಿಗೆ ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಬಿಲ್ಲಿನಲ್ಲಿಯೇ ಕಡಿತಗೊಳಿಸಲಾಗುವುದು. ಅವುಗಳನ್ನು ಕಡಿತಗೊಳಿಸುವಲ್ಲಿ/ ಪಾವತಿಸುವಲ್ಲಿ ಅರಣ್ಯ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

27. ಕಾಮಗಾರಿಗಳ ವೆಚ್ಚದ ಬಿಲ್ಲನ್ನು ಪಾವತಿ ಮಾಡುವಾಗ 2019-20ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರಕ್ಕೆ ವಸೂಲಿ ಮಾಡಲಾಗುವ ಚಾಲ್ತಿಯಲ್ಲಿರುವ ತೆರಿಗೆ/ ಇತರೆ ಕಟಾವಣೆಗಳ ದರದಲ್ಲಿ ನಂತರ ಯಾವುದಾದರೂ ಬದಲಾವಣೆಗಳು ಆದಲ್ಲಿ ಅಂತಹ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಗುತ್ತಿಗೆದಾರರು ಯಾವುದೇ ತಕರಾರು ಮಾಡದೇ ಕಡ್ಡಾಯವಾಗಿ ಸರ್ಕಾರಕ್ಕೆ ಪಾವತಿಸಲು ಬದ್ಧರಾಗಿರಬೇಕು.

28. ಕೆಲಸಗಳನ್ನು ನಿರ್ವಹಿಸುವಾಗ ನೈಸರ್ಗಿಕವಾಗಿ ಬೆಳೆದಿರುವ/ ಬೆಳೆಸಿರುವ ನೆಡುತೋಪು, ಗಿಡ-ಮರಗಳನ್ನು ಕಡಿದು ನಾಶಪಡಿಸಿದಲ್ಲಿ/ ವನ್ಯಪ್ರಾಣಿಗಳಿಗೆ ತೊಂದರೆ ಉಂಟುಮಾಡಿದ್ದಲ್ಲಿ/ ಇನ್ನ್ಯಾವುದೇ ನೈಸರ್ಗಿಕ ಅಡಚಣೆ ಮಾಡಿರುವುದು ಕಂಡುಬಂದಲ್ಲಿ ಅಂತಹ ಗುತ್ತಿಗೆದಾರರ/ ಕೆಲಸಗಾರರ ವಿರುದ್ಧ ಚಾಲ್ತಿಯಲ್ಲಿರುವ ಅಧಿನಿಯಮ/ ನಿಯಮ/ ಆದೇಶಗಳ ಪ್ರಕಾರ ಕಾನೂನು ಕ್ರಮ ಜರುಗಿಸಿ ಸರ್ಕಾರಕ್ಕೆ ಉಂಟಾದ ನಷ್ಟವನ್ನು ವಸೂಲಿ ಮಾಡಲಾಗುವುದು. ಇದರಲ್ಲಿ ಯಾವುದೇ ರಿಯಾಯಿತಿ/ ವಿನಾಯಿತಿ ಇರುವುದಿಲ್ಲ.

29. ಕಾಮಗಾರಿಗಳಿಗೆ ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ/ ಸೌಕರ್ಯಗಳನ್ನು ಸ್ವತಃ ಗುತ್ತಿಗೆದಾರರೇ ನೀಡಬೇಕು. ಕಾಮಗಾರಿ ನಿರ್ವಹಿಸುವಾಗ ಗುತ್ತಿಗೆದಾರರಿಗೆ ಅಥವಾ ಅವರಿಂದ ನೇಮಿಸಲ್ಪಟ್ಟ ಕಾರ್ಮಿಕರಿಗೆ ಯಾವುದಾದರು ತೊಂದರೆ/ ನಷ್ಟ ಉಂಟಾದಲ್ಲಿ ಇಲಾಖೆಯು ಯಾವುದೇ ರೀತಿಯಲ್ಲಿ ಜವಾಬ್ದಾರಿ ಹೊಂದುವುದಿಲ್ಲ ಮತ್ತು ಸರ್ಕಾರದಿಂದ ಯಾವುದೇ ಪರಿಹಾರ ದೊರೆಯುವುದಿಲ್ಲ. ಅಂತಹ ಪರಿಹಾರವನ್ನು ಗುತ್ತಿಗೆದಾರರ ಸ್ವಂತ ಖರ್ಚಿನಿಂದ ಭರಿಸಬೇಕಾಗಿರುತ್ತದೆ.

30. ಟೆಂಡರಿಗೆ ನಮೂದಿಸಿರುವ ಕಾಮಗಾರಿಯ ಮೊತ್ತವು ಅಂದಾಜು ಮೊತ್ತವಾಗಿದ್ದು, ಹಣ ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಣವನ್ನು ಪಾವತಿಸಲಾಗುವುದು. ಮಂಜೂರಾದ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಅದಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರು ಕಾಲಕಾಲಕ್ಕೆ ನೀಡುವ ಲಿಖಿತ/ ಮೌಖಿಕ ಆದೇಶಕ್ಕೆ ಅನುಗುಣವಾಗಿ ಇರತಕ್ಕದ್ದು. ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ/ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿರಬೇಕಾಗುತ್ತದೆ.

31. ಮೇಲಿನ ಕಾಮಗಾರಿಗಳಿಗೆ ಮುಂಗಡವಾಗಿ ಹಣ ಪಾವತಿ ಮಾಡಲಾಗುವುದಿಲ್ಲ. ಭಾಗಶಃ ಕೆಲಸ/ ಅಪೂರ್ಣ ಕಾಮಗಾರಿಗಳಿಗೆ ಯಾವುದೇ ಹಣ ಪಾವತಿ ಮಾಡಲಾಗುವುದಿಲ್ಲ. ಅಲ್ಲದೆ ಟೆಂಡರುದಾರರ ಜವಾಬ್ದಾರಿಯ ಮೇಲೆ ಕಾಮಗಾರಿಯನ್ನು ಕಾನೂನಿನನ್ವಯ ಕಾರ್ಯಗತಗೊಳಿಸಲಾಗುವುದು ಹಾಗೂ ಗುತ್ತಿಗೆದಾರರು ಇಲಾಖೆಗೆ ನೀಡಿರುವ ಭದ್ರತಾ ಠೇವಣಿ ಮತ್ತು ವ್ಯತ್ಯಾಸದ ಹಣವನ್ನು ಸರ್ಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು.

32. ಕಾಮಗಾರಿಯನ್ನು ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು. ಸಾಮಾನ್ಯವಾಗಿ ಗುತ್ತಿಗೆಯ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ. ಅತೀ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸ್ಥಿರೀಕರಿಸಲಾದ ಕಾಮಗಾರಿಯ ದರದ **ಶೇ. 05** ರಷ್ಟು ಮೊತ್ತವನ್ನು ಗುತ್ತಿಗೆದಾರರಿಗೆ ದಂಡವೆಂದು ವಿಧಿಸಿ ಅವಧಿಯನ್ನು ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಹಾಗೂ ಗುತ್ತಿಗೆದಾರರು ಇಲಾಖೆಗೆ ನೀಡಿರುವ ಭದ್ರತಾ ಠೇವಣಿ ಮತ್ತು ವ್ಯತ್ಯಾಸದ ಹಣವನ್ನು ಸರ್ಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು.

33. ಕೂಲಿಕಾರರ ಸಂಘ/ ಇತರೆ ಸಂಘಗಳು ಮೇಲಿನ ಕೆಲಸಗಳಿಗೆ ಟೆಂಡರ್ ನೀಡಲು ಇಚ್ಛಿಸಿದಲ್ಲಿ ಸಂಘಗಳ ನೋಂದಣಿ ನಿಯಮದಂತೆ ಸದರಿ ಸಂಘಗಳು ಕಡ್ಡಾಯವಾಗಿ ಅರಣ್ಯ ಗುತ್ತಿಗೆದಾರರಾಗಿ ಈ ವಿಭಾಗದಲ್ಲಿ ನೋಂದಣಿಯಾಗಿರಬೇಕು ಮತ್ತು ಇ.ಎಂ.ಡಿ ಹಣವನ್ನು ಕಡ್ಡಾಯವಾಗಿ ನೀಡಬೇಕಾಗಿರುತ್ತದೆ. ಇಲ್ಲವಾದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.

34. ಸಫಲ ಟೆಂಡರುದಾರರು ಕರಾರು ಒಪ್ಪಂದಕ್ಕೆ ಸಹಿ ಮಾಡಿದ ನಂತರ ಟೆಂಡರನ್ನು ಹಿಂಪಡೆದುಕೊಂಡಲ್ಲಿ, ನಿಗಧಿತ ಅವಧಿಯ ಒಳಗೆ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ/ ನಿರಾಸಕ್ತಿ ಹೊಂದಿದ್ದಲ್ಲಿ ಅಂತಹ ಭದ್ರತಾ ಠೇವಣಿ ಮತ್ತು ವ್ಯತ್ಯಾಸದ ಹಣವನ್ನು ಸರ್ಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು. ಅಲ್ಲದೇ ಕಾಮಗಾರಿಯನ್ನು ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರಿಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖಾ ವತಿಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ, ಸರ್ಕಾರಕ್ಕೆ ಉಂಟಾಗುವ ನಷ್ಟದ ಮೊತ್ತವನ್ನು 1963ರ ಕರ್ನಾಟಕ ಅರಣ್ಯ ಅಧಿನಿಯಮ ಸೆಕ್ಷನ್ 109ರ ಭೂ ಕಂದಾಯ ವಸೂಲಿಯಂತೆ ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು. ಇದಕ್ಕೆ ಟೆಂಡರುದಾರರು ಬದ್ಧರಾಗಿರತಕ್ಕದ್ದು.

35. **ನಿರ್ವಹಣೆ ಅವಧಿ:–** ಹೊಸ ಕಾಮಗಾರಿಗಳಿಗೆ – **ಎರಡು ವರ್ಷ**

ನಿರ್ವಹಣೆ/ ದುರಸ್ಥಿ/ ಅಭಿವೃದ್ಧಿ ಕಾಮಗಾರಿಗಳಿಗೆ – **ಒಂದು ವರ್ಷ**

36. ಮೇಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನೀಡಲಾಗುವ ಭದ್ರತಾ ಠೇವಣಿ ಹಣವನ್ನು ಕಾರ್ಯದೇಶದಲ್ಲಿ ನಿಗಧಿಪಡಿಸಲಾದ ನಿರ್ವಹಣೆ ಅವಧಿಯಲ್ಲಿ **(ನಿರ್ವಹಣೆ ಅವಧಿಯು ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ)** ನಿರ್ವಹಿಸಲಾದ ಕಾಮಗಾರಿಯಲ್ಲಿ ಯಾವುದೇ ತೊಂದರೆ/ ದೋಷ ಇರುವುದಿಲ್ಲ ಎಂಬ **ನಿರಾಕ್ಷೇಪಣಾ** ಪತ್ರವನ್ನು ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರಿಂದ ಪಡೆದ ನಂತರವೇ ಹಿಂದಿರುಗಿಸಲಾಗುವುದು.

37. ಪೂರ್ಣಗೊಂಡ ಕಾಮಗಾರಿಯಲ್ಲಿ ಯಾವುದಾದರು ದೋಷಗಳು ಕಂಡುಬಂದಲ್ಲಿ ಅದನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸರಿಪಡಿಸುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ಇಲಾಖಾ ವತಿಯಿಂದ ಸದರಿ ದೋಷಗಳನ್ನು ಸರಿಪಡಿಸಿಕೊಂಡ ನಂತರ ಗುತ್ತಿಗೆದಾರರು ನೀಡಿರುವ ಭದ್ರತಾ ಠೇವಣಿ ಹಣದಲ್ಲಿ ಸದರಿ ವೆಚ್ಚಗಳನ್ನು ಭರಿಸಲಾಗುವುದು. ಒಂದು ವೇಳೆ ನೀಡಲಾದ ಭದ್ರತಾ ಠೇವಣಿಗಿಂತ ಹೆಚ್ಚು ವೆಚ್ಚವಾದಲ್ಲಿ ಅಂತಹ ವ್ಯತ್ಯಾಸದ ಹಣವನ್ನು ಗುತ್ತಿಗೆದಾರರು ಯಾವುದೇ ತಂಟೆ–ತಕರಾರು ಮಾಡದೇ ಇಲಾಖೆಗೆ ನೀಡಲು ಬದ್ಧರಾಗಿರಬೇಕು.

38. ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿಯವರ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

39. **ಯಶಸ್ವಿ ಟೆಂಡರುದಾರರ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಅಗತ್ಯಬಿದ್ದರೆ ಅವಶ್ಯಕತೆ ಎನಿಸಿದ ಹೆಚ್ಚುವರಿ ಷರತ್ತುಗಳನ್ನು ವಿಧಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ವನ್ಯಜೀವಿ ವಿಭಾಗ ಇವರದ್ದಾಗಿದ್ದು ಇದಕ್ಕೆ ಅರಣ್ಯ ಗುತ್ತಿಗೆದಾರರು/ ಟೆಂಡರುದಾರರು ಬದ್ಧರಾಗಿರಬೇಕು.**

40. ಗುತ್ತಿಗೆದಾರರು ಕಾಮಗಾರಿಯನ್ನು/ ಕಾಮಗಾರಿಯ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ/ ವರ್ಗಾಯಿಸುವಂತಿಲ್ಲ. ಕಾಮಗಾರಿಯನ್ನು ಪ್ರಾರಂಭಿಸಿ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಬಿಟ್ಟು ಹೋದಲ್ಲಿ ಇಲಾಖೆಗೆ ನೀಡಿರುವ ಭದ್ರತಾ ಠೇವಣಿ ಮೊತ್ತವನ್ನು ಇಲಾಖೆಗೆ ಮುಟ್ಟುಗೋಲು ಹಾಕಿಕೊಂಡು ಉಳಿದಿರುವ ಕಾಮಗಾರಿಯನ್ನು ಮೂಲ ಗುತ್ತಿಗೆದಾರರ ಜವಾಬ್ದಾರಿಯ ಮೇಲೆ ಇಲಾಖಾ ವತಿಯಿಂದ ಕೈಗೊಳ್ಳಲಾಗುವುದು ಹಾಗೂ ಅಂತವರನ್ನು **ಕಪ್ಪುಪಟ್ಟಿಗೆ** ಸೇರಿಸಲಾಗುವುದು.

41. ಈ ಪ್ರದೇಶವು ವನ್ಯಜೀವಿ ಪ್ರದೇಶವಾದ್ದರಿಂದ ಸಂಜೆ 06.00 ರಿಂದ ಬೆಳಿಗ್ಗೆ 06.00ರವರೆಗೆ ಯಾವುದೇ ಕೆಲಸ ನಿರ್ವಹಿಸುವಂತಿಲ್ಲ.

42. ಕಾಮಗಾರಿಗಳಿಗೆ ಬಳಸುವ ಸಾಮಾಗ್ರಿಗಳ ಗುಣಮಟ್ಟ ಮತ್ತು ಪರಿಮಾಣವನ್ನು (As per Tender Specification) ವಲಯ ಅರಣ್ಯಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರಿಂದ ಪರಿಶೀಲನೆ ನಡೆಸಿ, ದೃಢೀಕರಣ ಪಡೆದ ನಂತರ ಕಾಮಗಾರಿಗೆ ಬಳಸತಕ್ಕದ್ದು ಮತ್ತು ಕಾಮಗಾರಿಯನ್ನು ಪರಿಣಿತ ಕೆಲಸಗಾರರ ಮೂಲಕ ಮಾತ್ರ ನಿರ್ವಹಿಸತಕ್ಕದ್ದು.

43. ಟೆಂಡರ್ ವಿಷಯದಲ್ಲಿ ವಿವಾದ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರಿಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ. ಅವರ ತೀರ್ಮಾನವೇ ಅಂತಿಮವಾಗಿರುತ್ತದೆ. ನ್ಯಾಯಿಕ ವ್ಯಾಜ್ಯಗಳು **ಕೊಡಗು ಜಿಲ್ಲೆಯ** ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ.

44. ಕಾಮಗಾರಿಗಳ ವಿವರ/ ಮಾಹಿತಿ/ನಿಬಂಧನೆಗಳ ಬಗ್ಗೆ ಈ ಕೆಳ ಸಹಿದಾರರ ಕಚೇರಿಯಿಂದ/ ಸಂಬಂಧಪಟ್ಟ ವಲಯ ಕಚೇರಿಗಳಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

45. ಈ ಕಚೇರಿಯಿಂದ ವಿತರಿಸಲಾಗುವ ಟೆಂಡರ್ ಫಾರಂನಲ್ಲಿ (ಒಂದು ಟೆಂಡರ್ ಫಾರಂನಲ್ಲಿ ಒಂದು ಕಾಮಗಾರಿಯ ದರವನ್ನು ಮಾತ್ರ ನಮೂದಿಸಬಹುದಾಗಿದೆ) ಈ ವಿಭಾಗದ ನೊಂದಾಯಿತ ಅರಣ್ಯ ಗುತ್ತಿಗೆದಾರರು ಟೆಂಡರ್ ವಿವರವನ್ನು ಭರ್ತಿ ಮಾಡಿ ಮೊಹರಾದ ಲಕೋಟೆಯನ್ನು ಟೆಂಡರ್ ದಿನಾಂಕದಂದು ಅಪರಾಹ್ನ 02.00 ಗಂಟೆಯಿಂದ 03.00 ಗಂಟೆಯ ಒಳಗೆ ನೀಡಿದಲ್ಲಿ ಸದ್ರಿ ಟೆಂಡರನ್ನು ಸ್ವೀಕರಿಸಲಾಗುವುದು. ಸ್ವೀಕರಿಸಲಾದ ಟೆಂಡರನ್ನು ಅದೇ ದಿನ ಅಪರಾಹ್ನ 05.00 ಗಂಟೆಗೆ ಭಾಗವಹಿಸಿದ ಅರಣ್ಯ ಗುತ್ತಿಗೆದಾರರ ಸಮಕ್ಷಮ ಈ ಕೆಳ ಸಹಿದಾರರು/ ಪ್ರಾಧೀಕೃತಗೊಂಡ ಅಧಿಕಾರಿಗಳಿಂದ ತೆರೆದು ಓದಲಾಗುವುದು. ಒಂದು ವೇಳೆ ಟೆಂಡರ್ ದಿನಾಂಕದಂದು ಸಾರ್ವಜನಿಕ ರಜೆ ಎಂದು ಘೋಷಿತವಾದಲ್ಲಿ ಮರು ದಿನ ಅದೇ ಸಮಯಕ್ಕೆ ಟೆಂಡರನ್ನು ಸ್ವೀಕರಿಸಿ ತೆರೆದು ಓದಲಾಗುವುದು.

46. ಟೆಂಡರ್ ಫಾರಂ ಒಂದರ ದರ ರೂ. 250 + ಎಫ್.ಡಿ.ಎಫ್ 12% = 30.00 + ಜಿ.ಎಸ್.ಟಿ 18% = 46.00 ಒಟ್ಟು ರೂ. 326.00 (ಮೂನ್ನೂರ ಇಪ್ಪತ್ತಾರು ಮಾತ್ರ) ನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರ ಕಚೇರಿಯಲ್ಲಿ ಪಾವತಿಸಿ ಟೆಂಡರ್ ಫಾರಂನ್ನು ಟೆಂಡರ್ ದಿನಾಂಕದಂದು ಅಪರಾಹ್ನ 1.00 ಗಂಟೆಯೊಳಗೆ ಪಡೆದುಕೊಳ್ಳಬಹುದು. ಟೆಂಡರ್ ಫಾರಂನ್ನು ವರ್ಗಾಯಿಸಲಾಗುವುದಿಲ್ಲ/ ಮೌಲ್ಯವನ್ನು ಹಿಂದಿರುಗಿಸಲಾಗುವುದಿಲ್ಲ.

47. ಟೆಂಡರಿಗೆ ಸೂಚಿಸಿದ ಇ.ಎಂ.ಡಿ ಮೊತ್ತವನ್ನು ಆಯಾ ಕೆಲಸಕ್ಕೆ ನಿಗಧಿಪಡಿಸಿರುವ ಮೊತ್ತಕ್ಕೆ ಪ್ರತ್ಯೇಕ ಪ್ರತ್ಯೇಕ ಡಿ.ಡಿಯನ್ನು The Deputy Conservator of Forests, Wildlife Division, Madikeri ಇವರ ಪದನಾಮದಲ್ಲಿ ಮಡಿಕೇರಿಯಲ್ಲಿ ಸಂದಾಯವಾಗುವಂತೆ **ರಾಷ್ಟ್ರೀಕೃತ ಬ್ಯಾಂಕಿನಿಂದ** ಪಡೆದು ಟೆಂಡರ್ ಫಾರಂನೊಂದಿಗೆ ಅಗತ್ಯ ದಾಖಲಾತಿಗಳ ಸಮೇತ (ಕಂದಾಯ ತೆರಿಗೆ, ಜಿ.ಎಸ್.ಟಿ, ವೃತ್ತಿ ತೆರಿಗೆ, ಆದಾಯ ತೆರಿಗೆಯ ಕಾಲೋಚಿತ ತಿರುವಳಿ ಪತ್ರಗಳು) ಮೊಹರಾದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ವಿಳಾಸ/ ಯಾವ ಕೆಲಸಕ್ಕಾಗಿ ಟೆಂಡರ್ ಹಾಕಲಾಗುತ್ತಿದೆ ಎಂಬ ವಿವರವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು ಹಾಗೂ ಕಚೇರಿಯಲ್ಲಿ ಇಡಲಾಗುವ ಟೆಂಡರ್ ಪೆಟ್ಟಿಗೆಗೆ ಹಾಕತಕ್ಕದ್ದು, ನಿಗಧಿಪಡಿಸಿದ ಅವಧಿಯ ನಂತರ ಬಂದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ. ಈ ವಿಷಯದಲ್ಲಿ ಅಂತಿಮವಾಗಿ ಯಾವುದೇ ತಿದ್ದುಪಡಿಯನ್ನು ಮಾಡುವ/ ನಿಯಮ/ ನಿಬಂಧನೆ ಸೇರಿಸುವ ಅಧಿಕಾರ ಈ ಕೆಳ ಸಹಿದಾರರಿಗಿರುತ್ತದೆ. ಅರಣ್ಯ ಗುತ್ತಿಗೆದಾರರು ಇದಕ್ಕೆ ಬದ್ಧರಾಗಿರಬೇಕು.

48. ಸಿವಿಲ್ ಕಾಮಗಾರಿಗಳಿಗೆ ಭಾಗವಹಿಸುವ ಟೆಂಡರುದಾರರು ಕಳೆದ ಎರಡು ವರ್ಷಗಳಲ್ಲಿ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಲೋಕೋಪಯೋಗಿ ಇಲಾಖೆಯ ಸಮರ್ಥ ಅಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

49. ಕೆರೆ ನಿರ್ಮಾಣ /ಹಾಲಿ ಇರುವ ಕೆರೆಯ ಹೂಳೆತ್ತುವ ಕಾಮಗಾರಿಗೆ ಭಾಗವಹಿಸುವ ಟೆಂಡರುದಾರರು ಸ್ವಂತ ಯಂತ್ರಗಳನ್ನು ಹೊಂದಿರತಕ್ಕದ್ದು (Excavators) ಮತ್ತು ಅರಣ್ಯ ಇಲಾಖೆಯಲ್ಲಿ ಕಳೆದ 03 ವರ್ಷಗಳಲ್ಲಿ ಕನಿಷ್ಟ 10 ಸಂಖ್ಯೆ ಕೆರೆ ನಿರ್ಮಾಣ ಅಥವಾ ಹಾಲಿ ಇರುವ ಕೆರೆಯ ಹೂಳೆತ್ತುವ ಕಾರ್ಯವನ್ನು ಕೈಗೊಂಡು ಹೊಸ ಕೆರೆಯನ್ನು ಎರಡು ವರ್ಷದವರೆಗೆ ಮತ್ತು ಹೂಳೆತ್ತಿರುವ ಕೆರೆಯನ್ನು ಒಂದು ವರ್ಷದವರೆಗೆ ನಿರ್ವಹಣೆ ಮಾಡಿರುವ ಬಗ್ಗೆ ದೃಢೀಕರಣ ಪತ್ರ, ಯಂತ್ರಗಳ ಮಾಲೀಕತ್ವದ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದೇ ಇದ್ದಲ್ಲಿ ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.

50. ಅನುಬಂಧ-01ರಲ್ಲಿ ನಮೂದಿಸಿರುವ ಐಟಂಗಳ ಸರಬರಾಜು/ ಕಾಮಗಾರಿಗಳನ್ನು ನಿರ್ವಹಿಸಲು ನಿಗಧಿಪಡಿಸಿರುವ ಸ್ಥಳವನ್ನು ಟೆಂಡರುದಾರರೇ ಖುದ್ದಾಗಿ ಬೇಟಿ ಮಾಡಿ/ ಪರಿಶೀಲನೆ ಮಾಡಿ ಆ ಕಾಮಗಾರಿ/ ಐಟಂಗಳ ವಿವರವನ್ನು ಖಚಿತಪಡಿಸಿಕೊಳ್ಳತಕ್ಕದ್ದು. ನಿಗಧಿಪಡಿಸಲಾದ ಕಾಮಗಾರಿ/ ಐಟಂಗಳ ಸಂಖ್ಯೆ/ ಸ್ಥಳ/ ಮೊಬಲಗು ವ್ಯತ್ಯಾಸವಾದಲ್ಲಿ ಪರಿಷ್ಕೃತ ವಿವರವನ್ನು ಕಾರ್ಯದೇಶದ ಮೊದಲು ನೀಡಲಾಗುವುದು. ಅಂತಹ ಕಾಮಗಾರಿ/ಐಟಂಗಳನ್ನು ಸಹ ನಿರ್ವಹಿಸಬೇಕು/ ಸರಬರಾಜು ಮಾಡಬೇಕಾಗಿರುತ್ತದೆ.

51. ಸರಬರಾಜು ಮಾಡುವ ಸಾಮಾಗ್ರಿ/ಐಟಂಗಳು ಐ.ಎಸ್.ಐ. ಗುಣಮಟ್ಟದ್ದಾಗಿರಬೇಕು ಹಾಗೂ ಕನಿಷ್ಟ 01 ವರ್ಷ ಗ್ಯಾರಂಟಿ ಅವಧಿಯೊಂದಿರಬೇಕು. ಹೆಚ್ಚುವರಿ ಅವಧಿ ಇದ್ದಲ್ಲಿ, ಅದನ್ನು ಟೆಂಡರ್ ಫಾರಂನಲ್ಲಿ ನಮೂದಿಸಬೇಕು ಈ ಬಗ್ಗೆ ಸಂಬಂಧಿಸಿದ ದಾಖಲೆಗಳನ್ನು ಟೆಂಡರ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

ಮಡಿಕೇರಿ.
ದಿನಾಂಕ:24.04.2019

ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಮಡಿಕೇರಿ,